# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 126 | Pages. 2 | Date: 21-04-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 126 – ಪುಟಗಳು : 2 | 21-04-2026 | ಮಂಗಳವಾರ | Ph: 8762954248 | ದರ : ₹1


# ಬಸವೇಶ್ವರರ ಕಂಚಿನ ಪ್ರತಿಮೆ ಅನಾವರಣ

## ಬಹುವರ್ಷಗಳ ಕನಸು–ನನಸು | ಕ್ರಾಂತಿಕಾರಿಗೆ ಗೌರವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಕಲ್ಪತರು ನಾಡು, ಸಿದ್ಧರ ಬೀಡು ಅರಸೀಕೆರೆ ನಗರದಲ್ಲಿ ಕಡೆಗೂ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರರ ಕಂಚಿನ ಪ್ರತಿಮೆ ಲೋಕಾರ್ಪಣೆ ಮಾಡಲಾಯಿತು.

ಈ ಮೂಲಕ ತಾಲೂಕಿನ ಬಸವ ತತ್ವ ಅನುಯಾಯಿಗಳು ದಶಕಗಳಿಂದ ಕಾಣುತ್ತಿದ್ದ ಕನಸು, ಅಕ್ಷಯ ತೃತೀಯ ದಿನದಂದು ನನಸಾಯಿತು. ಇದರೊಂದಿಗೆ ಐತಿಹಾಸಿಕ ಕ್ಷಣಕ್ಕೆ ಸೋಮವಾರ ನಗರ ಸಾಕ್ಷಿಯಾಯಿತು.

ಜಗಜ್ಯೋತಿ ಬಸವೇಶ್ವರರ ಪುತ್ಥಳಿ ಅನಾವರಣ ಸಮಿತಿ ವತಿಯಿಂದ ನಗರದ ಹೃದಯ ಭಾಗ ಪಿಪಿ ವೃತ್ತಕ್ಕೆ ಹೊಂದಿಕೊಂಡಂತೆ ಅಶ್ವರೂಢ ಜಗಜ್ಯೋತಿ ಬಸವೇಶ್ವರ ಪುತ್ಥಳಿಯನ್ನು ರಾಜ್ಯ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ ಶಿವಲಿಂಗೇಗೌಡ ಲೋಕಾರ್ಪಣೆ ಮಾಡಿದರು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮಾಜಿಕ ಕ್ರಾಂತಿಯ ಹರಿಕಾರ, ಮಹಾ ಮಾನವತಾವಾದಿ, ಜಗಜ್ಯೋತಿ ಬಸವೇಶ್ವರರ ಪುತ್ಥಳಿ ಸ್ಥಾಪನೆ ಆಗಿರುವುದು ತಾಲೂಕಿಗೆ ಕಳಸ ಪ್ರಾಯವಾಗಿದೆ ಎಂದು ಸಂತಸ ಹಂಚಿಕೊಂಡರು.

ನಗರದ ಎರಡು ಪ್ರಮುಖ ವೃತ್ತಗಳಲ್ಲಿ ಜಗಜ್ಯೋತಿ ಬಸವೇಶ್ವರರು ಹಾಗೂ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಪ್ರತಿಮೆಗಳು ತಲೆ ಎತ್ತಿ ನಿಂತಿದ್ದು, ಈ ಇಬ್ಬರು ದಾರ್ಶನಿಕರ ದರ್ಶನ ಮಾಡಿದರೆ ಸಾಲದು, ಇವರು ಸಮಾಜಕ್ಕೆ ನೀಡಿದ ಸಮಾನತೆಯ ಸಂದೇಶವನ್ನು ಬದುಕಿನಲ್ಲಿ ಅಳವಡಿಸಿಕೊಂಡು ನಾವೆಲ್ಲ ನಡೆದಿದ್ದೇ ಆದರೆ ಅದೇ ನಿಜವಾಗಿಯೂ ಈ ಮಹಾ ಪುರುಷರಿಗೆ ನೀಡಿದ, ನೀಡುವ ಗೌರವವಾಗುತ್ತದೆ ಎಂದರು.

ಕೆರಗೋಡಿ ರಂಗಾಪುರದ ಗುರುಪರದೇಶಿ ಕೇಂದ್ರ, ಸ್ವಾಮೀಜಿ ಮಾತನಾಡಿ, ಕಾಯಕವೇ ಕೈಲಾಸ ಎಂಬ ಬಸವಣ್ಣನ ಸಂದೇಶ ಸಾರ್ವಕಾಲಿಕ ಮಂತ್ರವಾಗಿದೆ. ಬಸವಾದಿ ಶರಣರ ಪ್ರತಿಮೆಗಳನ್ನ ಸ್ಥಾಪಿಸಿದರೆ ಸಾಲದು, ಅವರ ತತ್ವ ಸಿದ್ಧಾಂತಗಳನ್ನ ವಚನ ಸಾಹಿತ್ಯದಲ್ಲಿ ಅಡಗಿರುವ ಬದುಕಿನ ಸಾರವನ್ನು ನಾವೆಲ್ಲ ಅರಿತು ನಡೆದರೆ ಸಮಾಜದಲ್ಲಿ ಸಾಮರಸ್ಯ ಎಂಬುದು ಸದೃಢವಾಗಿ ಬೆಳೆಯುತ್ತದೆ. ಶಿವಲಿಂಗೇಗೌಡರು ಮತ್ತು ಅವರೆಲ್ಲ ಬೆಂಬಲಿಗರು ಸೇರಿ ಬಸವಣ್ಣ ಅವರ ಪುತ್ಥಳಿಯನ್ನು ಪ್ರತಿಷ್ಠಾಪಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಸವೇಶ್ವರರ ಪುತ್ಥಳಿ ಅನಾವರಣ ಸಮಿತಿಯ ಜಿ.ಬಿ. ಶಶಿಧರ್ ಮಾತನಾಡಿ, ಅಸಮಾನತೆ ವಿರುದ್ಧ ಸಮರ ಸಾರಿದ ಮಹಾ ಮಾನವತಾವಾದಿ ಬಸವೇಶ್ವರರ ಪುತ್ಥಳಿ ನಗರದಲ್ಲಿ ಸ್ಥಾಪನೆಯಾಗಬೇಕು ಎಂಬುದು ಬಸವ ತತ್ವ ಅನುಯಾಯಿಗಳ ಕನಸಾಗಿತ್ತು. ಆ ಕನಸು ಇಂದು ನನಸಾಗಿದೆ. ಇದಕ್ಕೆ



ಕಾರಣಕರ್ತರಾದ ಶಾಸಕ ಶಿವಲಿಂಗೇಗೌಡರು ಸೇರಿದಂತೆ ಪುತ್ಥಳಿ ನಿರ್ಮಾಣ ಸಮಿತಿಯ ಎಲ್ಲಾ ಸದಸ್ಯರಿಗೂ ಧನ್ಯವಾದ ಎಂದು ಹೇಳಿದರು.

### ಪ್ರತಿಮೆಗೂ ಹಲವರು ಅಡ್ಡಿಪಡಿಸಿದರು

ಸಮಿತಿಯ ಕಾರ್ಯಾಧ್ಯಕ್ಷ ಗಂಜಿಗೆರೆ ಚಂದ್ರಶೇಖರ್ ಮಾತನಾಡಿ, ಜಗಜ್ಯೋತಿ ಬಸವೇಶ್ವರರ ಪುತ್ಥಳಿ ಸ್ಥಾಪನೆಗೂ ಸಹ ಕಾಣದ ಕೈಗಳು ಅನೇಕ ರೀತಿಯ ಅಡೆತಡೆ ಮಾಡಿದ್ದು ವಿಷಾದ ಸಂಗತಿ.

ಈ ಎಲ್ಲಾ ಘಟನೆಗಳನ್ನು ಮೀರಿ ಇಂದು ಬಸವಣ್ಣನವರ ಪ್ರತಿಮೆ ಸ್ಥಾಪನೆಯಾಗಿದ್ದು ನಿಜಕ್ಕೂ ಸಂತಸದ ವಿಷಯವಾಗಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಯಳನಾಡು ಮೂರು ಕಳಸ ಮಠದ ಜ್ಞಾನಪ್ರಭು ಸಿದ್ಧರಾಮ ದೇಶಿಕೇಂದ್ರ, ಸ್ವಾಮೀಜಿ, ಮಾಡಾಳು ನಿರಂಜನ ಪೀಠದ ರುದ್ರಮುನಿ ಸ್ವಾಮೀಜಿ, ಕೋಳಗುಂದ ಕೇದಿಗೆ ಮಠದ ಚಂದ್ರಶೇಖರ ಸ್ವಾಮೀಜಿ, ಡಿ.ಎಂ. ಕುರ್ಕೆ ಬೂದಿಹಾಳ ವಿರಕ್ತ ಮಠದ ಶಶಿಶೇಖರ ಸ್ವಾಮೀಜಿ, ಸಂಸದ ಶ್ರೇಯಸ್ ಎಂ.ಪಟೇಲ್, ಬಸವ ಪುತ್ಥಳಿ ಅನಾವರಣ ಸಮಿತಿ ಅಧ್ಯಕ್ಷ ಅಡವಿ ಸ್ವಾಮಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಶೇಖರ್, ಸಮಿತಿಯ ಬಂಕ್ ಮಂಜಣ್ಣ, ಉಮೇಶ್, ಜ್ಞಾನೇಶ್, ಜಿಪಂ ಮಾಜಿ ಉಪಾಧ್ಯಕ್ಷ ಬಿಳಿಚೌಡಯ್ಯ, ಕೇಶವಣ್ಣ ಇತರರು ಉಪಸ್ಥಿತರಿದ್ದರು.

## ಬಸವಣ್ಣ ಎಲ್ಲರಿಗೂ ದಾರಿ ದೀಪ



ಹಾಸನ: ಲಿಂಗ ತಾರತಮ್ಯ ಸೇರಿ ಅನೇಕ ಗೊಡ್ಡು ಸಂಪ್ರದಾಯಗಳ ವಿರುದ್ಧ ಹೋರಾಡಿದ ವಿಶ್ವಗುರು ಬಸವಣ್ಣ ಅವರ ತತ್ವಾದರ್ಶಗಳು ನಮಗೆ ದಾರಿದೀಪ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಮ್ಮಿಕೊಂಡಿದ್ದ ಬಸವ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, 800 ವರ್ಷಗಳ ಹಿಂದೆಯೇ ಪ್ರಜಾಪ್ರಭುತ್ವದ ಸಂದೇಶ ಸಾರಿದವರು ವಿಶ್ವಗುರು ಬಸವಣ್ಣ ಎಂದರು.

ಬಾಲ್ಯದಲ್ಲಿಯೇ ತಮ್ಮ ಸಹೋದರಿಗೆ ಉಪನಯನ ಮಾಡಲಿಲ್ಲವೆಂಬುದನ್ನು ಪ್ರಶ್ನಿಸಿ ಮೂಢ ನಂಬಿಕೆಗಳ ವಿರುದ್ಧ ಹೋರಾಟ ಪ್ರಾರಂಭಿಸಿದವರು ಬಸವಣ್ಣ. ಆ ಕಾಲದಲ್ಲಿ ಜಾರಿಯಲ್ಲಿದ್ದ ಸ್ತ್ರೀ ಅಸಮಾನತೆ, ಜಾತಿಯತೆ, ಕಂದಾಚಾರಗಳನ್ನು ಕಂಡು ಬಸವಣ್ಣ ಜರ್ಜರಿತರಾಗಿದ್ದರು. ಚಿಕ್ಕವಯಸ್ಸಿನಲ್ಲೇ ಜ್ಞಾನ, ಪ್ರಬುದ್ಧತೆ ಹೊಂದಿದ್ದ ಅವರು ಗೊಡ್ಡು ಸಂಪ್ರದಾಯಗಳ ವಿರುದ್ಧ ದನಿ ಎತ್ತಿದ್ದರು ಎಂದು ಸ್ಮರಿಸಿದರು.

ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ನಿವೃತ್ತ ಉಪನ್ಯಾಸಕ ಶಿವಶಂಕರಪ್ಪ ಮಾತನಾಡಿದರು.

ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಮುಖಂಡರಾದ ಬಿ.ಪಿ.ಐಸಾಮಿಗೌಡ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಯು.ಎಸ್. ಬಸವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಹೆಚ್.ಪಿ.ತಾರಾನಾಥ್ ಹಾಗು ಮುಂತಾದವರಿದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಬಸವೇಶ್ವರ ದೇವಸ್ಥಾನದಿಂದ ಆರಂಭವಾದ ಮೆರವಣಿಗೆಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಚಾಲನೆ ನೀಡಿದರು.

## ಸಮ ಸಮಾಜ ನಿರ್ಮಾಣಕ್ಕೆ ಬಸವಣ್ಣನವರ ಕೊಡುಗೆ ಅಪಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: 12ನೇ ಶತಮಾನದಲ್ಲಿಯೇ ಸಮ ಸಮಾಜದ ನಿರ್ಮಾಣಕ್ಕಾಗಿ ಹೋರಾಡಿದ ಬಸವಣ್ಣನವರು ಅನುಭವ ಮಂಟಪದ ಮೂಲಕ ಎಲ್ಲ ಸಮಾಜದವರನ್ನೂ ಒಗ್ಗೂಡಿಸಿ ಸಮಾನತೆ ಸ್ಥಾಪಿಸಲು ಶ್ರಮಿಸಿದರು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಸೋಮವಾರ ತಾಲೂಕು ಕಚೇರಿಯಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಜಾತಿ–ವರ್ಣರಹಿತ, ಶೋಷಣೆಯಿಲ್ಲದ ಸಮಾಜ ನಿರ್ಮಾಣವೇ ಬಸವಾದಿ ಶರಣರ ಉದ್ದೇಶವಾಗಿತ್ತು ಎಂದರು.

12ನೇ ಶತಮಾನದಲ್ಲಿಯೇ ವಚನಗಳ ಮೂಲಕ ಸಾಮಾಜಿಕ ಸುಧಾರಣೆಗೆ ದಾರಿ ತೋರಿದ ಬಸವಣ್ಣನವರು ಪ್ರಜಾಪ್ರಭುತ್ವದ ತಳಹದಿಯ ಸಮಾಜದ ಕಲ್ಪನೆಯನ್ನು ನೀಡಿದ ಮಹಾನ್ ದಾರ್ಶನಿಕರು ಎಂದು ಹೇಳಿದರು.

ಜಾತಿ ಬೇಡ ಎಂದು ಹೋರಾಡಿದ ಬಸವಣ್ಣನವರನ್ನೇ ಇಂದಿನ ಸಮಾಜ ಜಾತಿಗೆ ಕಟ್ಟಿ ಹಾಕಿರುವುದು ವಿಷಾದನೀಯ. ಸರ್ವರಿಗೂ ಸಮಬಾಳು–ಸಮಪಾಲು ಎಂಬ ತತ್ವ ಇಂದಿನ ದಿನಗಳಲ್ಲಿ ನಿಜವಾಗಿ ಸಾಕಾರಗೊಳ್ಳಬೇಕಿದೆ ಎಂದು ಅಭಿಪ್ರಾಯಪಟ್ಟರು.

ಬಸವಣ್ಣನವರನ್ನು ಜಗಜ್ಯೋತಿ ಬಸವೇಶ್ವರ, ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಭಂಡಾರಿ ಬಸವಣ್ಣ ಎಂದು ಕರೆಯಲಾಗುತ್ತದೆ. ಮಾನವೀಯತೆ, ಕಾಯಕನಿಷ್ಠೆ ಮತ್ತು ಧರ್ಮದ ಬುನಾದಿಯನ್ನು ಬಲಪಡಿಸಿದ ಅವರು ಆಕಾಯಕವೇ ಕೈಲಾಸಟಿ, ಆದಯವೇ ಧರ್ಮದ ಮೂಲಟಿ ಎಂಬ ವಚನಗಳ ಮೂಲಕ ಮಾನವತಾವಾದವನ್ನು ಸಾರಿದರು ಎಂದು ಬಣ್ಣಿಸಿದರು.

ಸಾಮಾಜಿಕ ಕಾರ್ಯಕರ್ತ ಯಡೇಹಳ್ಳಿ ಆರ್. ಮಂಜುನಾಥ್ ಮಾತನಾಡಿ, ಬಸವಣ್ಣನವರು ಜಾತಿ ವ್ಯವಸ್ಥೆಯ ವಿರುದ್ಧ ವಚನಗಳ ಮೂಲಕ ಸಮಾನತೆಯ ಸಂದೇಶ ಸಾರಿದ ದಾರ್ಶನಿಕರು. ಅವರ ವಚನಗಳ ಶಕ್ತಿ ವಿಶ್ವದ ಯಾವುದೇ ಸಾಹಿತ್ಯದೊಂದಿಗೆ ಸಮವಾಗಿ ತೂಗುತ್ತದೆ ಎಂದು ಹೇಳಿದರು. ಮಹಿಳಾ ಸಮಾನತೆಯ ಪರವಾಗಿ ಬಸವಣ್ಣನವರು ನೀಡಿದ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು.

ನಿವೃತ್ತ ತಹಸೀಲ್ದಾರ್ ಅಣ್ಣೇಗೌಡ ಮಾತನಾಡಿದರು. ವೀರಶೈವ ಸಮಾಜದ ದಿವಾನ್ ದೇವರಾಜ್, ಸಂಗಪ್ಪ, ಆರ್‌ಎಫ್‌ಓ ಹೇಮಂತ್ ಕುಮಾರ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಕಾಶ್ ಕುಮಾರ್, ಸಬ್ ಇನ್ಸ್ಪೆಕ್ಟರ್ ಮಹೇಶ್ ಹಾಗು ಇತರರಿದ್ದರು.

# ನುಗ್ಗೇಹಳ್ಳಿಯಲ್ಲಿ ಅರ್ಥಪೂರ್ಣ ಬಸವ ಜಯಂತಿ ಆಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ನುಗ್ಗೇಹಳ್ಳಿ ಗ್ರಾಮದ ವೀರಶೈವ ಸಮಾಜದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಕಾಡುಬಸವೇಶ್ವರ ಹಾಗೂ ಸಂಕೋಲೆ ಬಸವೇಶ್ವರ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಉತ್ಸವದೊಂದಿಗೆ ಬಸವ ಜಯಂತಿ ಅದ್ದೂರಿಯಾಗಿ ಆಚರಿಸಲಾಯಿತು.

ಗ್ರಾಮದ ಪೇಟೆ ಬೀದಿಯಲ್ಲಿರುವ ಶ್ರೀ ಸಂಕೋಲೆ ಬಸವೇಶ್ವರಸ್ವಾಮಿ ದೇವಾಲಯದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ ಅಭಿಷೇಕ ಹೂವಿನ ಅಲಂಕಾರ ಸೇರಿ ವಿವಿಧ ಪೂಜೆಗಳು ನೆರವೇರಿದವು. ನಂತರ ಶ್ರೀ ಬಸವೇಶ್ವರ ಸ್ವಾಮಿ ಹಾಗೂ ಬಸವಣ್ಣನವರ ಭಾವಚಿತ್ರಗಳಿಗೆ ಹೂವಿನ ಅಲಂಕಾರದೊಂದಿಗೆ ತೆರೆದ ವಾಹನದಲ್ಲಿ ಗ್ರಾಮದ ರಾಜ ಬೀದಿಗಳಲ್ಲಿ ಉತ್ಸವ ನೆರವೇರಿತು.

ಹಿರೀಸಾವೆ ರಸ್ತೆಯಲ್ಲಿರುವ ಮೂಲ ಕಾಡುಬಸವೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಅಭಿಷೇಕಗಳೊಂದಿಗೆ ಭಕ್ತರು ಪೂಜೆ ಸಲ್ಲಿಸುವ ಮೂಲಕ ಬಸವ ಜಯಂತಿ ಆಚರಿಸಿದರು. ಗ್ರಾಮದ ಶ್ರೀ ಅರೇಕಲಮ್ಮ ದೇವಾಲಯದ ಬಸವಣ್ಣನ ಉತ್ಸವ ನಡೆಸಲಾಯಿತು. ವೀರಶೈವ ಸಮಾಜದ ವತಿಯಿಂದ ಸಾರ್ವಜನಿಕರಿಗೆ ಅನ್ನ ದಾಸೋಹ ಪ್ರಸಾದ ವಿನಿಯೋಗ ಏರ್ಪಡಿಸಲಾಗಿತ್ತು.

ಜಿಲ್ಲಾ ವೀರಶೈವ ಸಮಾಜದ ಪ್ರಧಾನ ಕಾರ್ಯದರ್ಶಿ ಕೃಪಾ ಶಂಕರ್, ಹೋಬಳಿ ಅಧ್ಯಕ್ಷ ಎನ್.ಎಸ್. ಗಿರೀಶ್, ಜಯ ಕೀರ್ತಿ, ಎನ್.ಸಿ.ಕುಮಾರಸ್ವಾಮಿ, ಎನ್.ಎನ್. ರುದ್ರಸ್ವಾಮಿ ಇತರರಿದ್ದರು.

# ಡ್ರಗ್ಸ್ ವಿರುದ್ಧ ಕಲಾ ಹೋರಾಟ: ಸಕಲೇಶಪುರದಲ್ಲಿ ಜಾಗೃತಿ ಜ್ವಾಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನಲ್ಲಿ ಡ್ರಗ್ಸ್ ವಿರುದ್ಧ ಜಾಗೃತಿ ಮೂಡಿಸುವ ಉದ್ದೇಶದಿಂದ ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನ ವತಿಯಿಂದ ಏರ್ಪಡಿಸಿದ್ದ ಸನ್ಮಾನ, ಪುಸ್ತಕ ಬಿಡುಗಡೆ ಹಾಗೂ ಸಂಗೀತ ಸಂಜೆ ಕಾರ್ಯಕ್ರಮವು ಶನಿವಾರ ಸಂಜೆ ನಾಡಪ್ರಭು ಕೆಂಪೇಗೌಡ ಪ್ರತಿಮೆ ಆವರಣದಲ್ಲಿ ವಿಜೃಂಭಣೆಯಿಂದ ನೆರವೇರಿತು.

ರಾಜ್ಯ ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ದಲಿತ ಮುಖಂಡ ಹೆತ್ತೂರು ಅಣ್ಣಯ್ಯ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ರಂಗಕರ್ಮಿ ಪ್ರಸಾದ್ ರಕ್ಷಿದಿ ಮಾತನಾಡಿ, ಯುವ ಲೇಖಕಿ ಕುಮಾರಿ ಡಯಾನಾ ಡಿಸೋಜ ಅವರ ಚೊಚ್ಚಲ ಕೃತಿ ಆಅಂತರಂಗದ ಗುಟ್ಟುಟಿ ಹಾಗೂ ಸಾಹಿತಿ ವಿಶ್ವಾಸ್ ಗೌಡ ಅವರ 10ನೇ ಕೃತಿ ಆದೇವರನ್ನು ಹುಡುಕಬೇಕಾಗಿದೆಟಿ ಪುಸ್ತಕಗಳನ್ನು ಬಿಡುಗಡೆ ಮಾಡಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್ ಮಾತನಾಡಿ, ಚಳವಳಿ, ಹೋರಾಟ, ಸಾಹಿತ್ಯ ಮತ್ತು ಸಂಗೀತವು ಸಮಾಜ ಪರಿವರ್ತನೆಗೆ ಅತ್ಯಂತ ಪರಿಣಾಮಕಾರಿ ಸಾಧನಗಳಾಗಿವೆ ಎಂದು ಹೇಳಿದರು.

ಡ್ರಗ್ಸ್ ಎಂಬ ಮಹಾಮಾರಿ ವಿರುದ್ಧ ಹೋರಾಡಲು ಯುವ ಜನತೆ, ಸಾಹಿತ್ಯಕರು ಹಾಗೂ ಕಲಾವಿದರು ಒಂದಾಗಿ ಜಾಗೃತಿ ಮೂಡಿಸಬೇಕಿದ್ದು, ಸಮಾಜದಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸುವುದು ಅಗತ್ಯವೆಂದರು.

ಇಂತಹ ಕಾರ್ಯಕ್ರಮಗಳು ಕೇವಲ ಮನರಂಜನೆಗಾಗಿ ಅಲ್ಲ, ಸಮಾಜದ ಸಮಸ್ಯೆಗಳ ವಿರುದ್ಧ ಹೋರಾಡುವ ವೇದಿಕೆಗಳಾಗಿವೆ. ಕಲೆ ಮತ್ತು ಸಾಹಿತ್ಯ ಜನರನ್ನು ಒಂದಾಗಿಸಿ ಜಾಗೃತಿ ಮೂಡಿಸುವ ಶಕ್ತಿ ಹೊಂದಿದ್ದು, ಸಂಗೀತವು ಮನಸ್ಸುಗಳನ್ನು ಸಂಪರ್ಕಿಸುವ ಸೇತುವೆಯಾಗಿದೆ. ಯುವಕರು ಡ್ರಗ್ಸ್‌ನಿಂದ ದೂರವಿದ್ದು, ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದ ಸಂಚಾಲಕ ಮಲ್ನಾಡ್ ಮೆಹಬೂಬ್ ಮಾತನಾಡಿ, ಡ್ರಗ್ಸ್ ಸಮಾಜದ ಮೂಲಗಳನ್ನು ಹಾಳು ಮಾಡುವ ಗಂಭೀರ ಸವಾಲಾಗಿದೆ. ಯುವ ಜನತೆ ಇದರ ಬಲಿಯಾಗುತ್ತಿದ್ದರೆ ದೇಶದ ಭವಿಷ್ಯವೇ ಅಪಾಯದಲ್ಲಿದೆ. ಕೇವಲ ಸರ್ಕಾರದ ಕ್ರಮಗಳಿಂದ ಸಮಸ್ಯೆ ನಿವಾರಣೆಯಾಗುವುದಿಲ್ಲ. ಕುಟುಂಬ, ಶಿಕ್ಷಣ ಸಂಸ್ಥೆಗಳು, ಸಂಘಟನೆಗಳು ಹಾಗೂ ಸಮಾಜದ ಪ್ರತಿಯೊಬ್ಬರೂ ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಮೂಲಕ ಜಾಗೃತಿ ಮೂಡಿಸುವುದು ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದ್ದು, ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಚೇತನ ಮೂಡಿಸುತ್ತವೆ ಎಂದು ಹೇಳಿದರು. ಪತ್ರಕರ್ತ ನಾಗರಾಜ್ ಹೆತ್ತೂರು ಸ್ವಾಗತಿಸಿದರು.

ಕಾಂಗ್ರೆಸ್ ಮುಖಂಡ ಮುರಳಿ ಮೋಹನ್, ಒಕ್ಕಲಿಗರ ಸಂಘದ ಕಾರ್ಯದರ್ಶಿ ಜೈ ಮಾರುತಿ ದೇವರಾಜ್, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫೀಸ್, ಸರ್ಕಾರಿ ನೌಕರರ ಸಂಘದ ಶಾಂತರಾಜ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಯೋಗೇಶ್, ದಲಿತ ಮುಖಂಡ ನಲ್ಲುಳ್ಳಿ ಈರಪ್ಪ, ನಂಜಮ್ಮ, ಮಹಿಳಾ ಸಮಾಜದ ಅಧ್ಯಕ್ಷೆ ಕೌಸಲ್ಯ ಲಕ್ಷ್ಮಣ್‌ಗೌಡ, ವೀರಶೈವ ಸಮಾಜದ ಮುಖಂಡೆ ಅರ್ಚನಾ ಜಯಂತ್ ಇತರರಿದ್ದರು. ಕಾರ್ಯಕ್ರಮದ ಅಂಗವಾಗಿ ನಡೆದ ಸಂಗೀತ ಸಂಜೆ ಪ್ರೇಕ್ಷಕರನ್ನು ರಂಜಿಸಿತು. ವಿವಿಧ ಕಲಾವಿದರು ಕನ್ನಡ ಹಾಗೂ ಹಿಂದಿ ಹಾಡುಗಳನ್ನು ಹಾಡಿ ಮನರಂಜನೆ ನೀಡಿದರು.

# ಆರೋಗ್ಯಕ್ಕಾಗಿ ಪ್ರತಿಯೊಬ್ಬರೂ ಶೌಚಾಲಯ ಬಳಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸಾಂಕ್ರಾಮಿಕ ರೋಗಗಳು ಹರಡಬಾರದು ಹಾಗೂ ಆರೋಗ್ಯ ಉತ್ತಮವಾಗಿ ಇರಬೇಕೆಂದರೆ ಪ್ರತಿಯೊಬ್ಬ ನಾಗರಿಕರು ಶೌಚಾಲಯ ಬಳಸಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ತಿಳಿಸಿದರು.

ತಾಲೂಕಿನ ಬಾಗೂರು ಬೀಚಗೊಂಡನಹಳ್ಳಿ ಗ್ರಾಮದ ಮಾರುತಿ ದೇವಾಲಯದಲ್ಲಿ ನೂತನವಾಗಿ ನಿರ್ಮಾಣ ಮಾಡಲಾಗಿದ್ದ ಶೌಚಾಲಯ ಉದ್ಘಾಟಿಸಿ ಮಾತನಾಡಿದರು.

ಬೀಚಗೊಂಡನಹಳ್ಳಿ ಗ್ರಾಮದ ಮಾರುತಿ ದೇವಾಲಯಕ್ಕೆ ನಿತ್ಯವೂ ನೂರಾರು ಮಂದಿ ಭಕ್ತರು ಆಗಮಿಸುತ್ತಾರೆ. ಶುಕ್ರವಾರ ಸಾವಿರಕ್ಕೂ



ಹೆಚ್ಚು ಭಕ್ತರು ಆಗಮಿಸಿ ತಂಗುವುದರಿಂದ ಭಕ್ತರಿಗೆ ಶೌಚಾಲಯದ ಸಮಸ್ಯೆ ಇತ್ತು. ಗ್ರಾಮಸ್ಥರ ಮನವಿ ಮೇರೆಗೆ ನಿರ್ಮಾಣ ಮಾಡಲಾಗಿದೆ ಎಂದರು. ರಾಜಕಾರಣಿಗಳಿಗೆ ಸಾರ್ವಜನಿಕರು ಅಧಿಕಾರಿ ನೀಡುತ್ತಾರೆ. ಅಧಿಕಾರ ಲಭಿಸಿದಾಗ ಜನತೆ ನೆನಪು ಮಾಡಿಕೊಳ್ಳುವ ಕೆಲಸ ಮಾಡಬೇಕು. ಜನಪ್ರತಿನಿಧಿಗಳು ಮಾಡುವ ಕೆಲಸ ಶಾಶ್ವತವಾಗಿ ಇರುತ್ತದೆ. ಅಧಿಕಾರಿ ಪ್ರತಿ ಐದು ವರ್ಷಕ್ಕೊಮ್ಮೆ ಬದಲಾಗುತ್ತದೆ. ಆದರೆ ಮಾಡಿದ ಒಳ್ಳೆಯ ಕೆಲಸವನ್ನು ಸದಾ ನೆನಪು ಮಾಡಿಕೊಳ್ಳುತ್ತಾರೆ ಎಂದು ಹೇಳಿದರು. ರಾಜಕಾರಣಿಗಳು ಸ್ವಹಿತಕ್ಕಾಗಿ ಗ್ರಾಮಗಳಲ್ಲಿ ಗುಂಪುಗಾರಿಕೆ ಮಾಡುವುದು ತರವಲ್ಲ, ಅದರಿಂದ ಗ್ರಾಮದ ನೆಮ್ಮದಿ ಹಾಳಾಗುತ್ತದೆ. ಅಭಿವೃದ್ಧಿ ಕೆಲಸ ಮಾಡಿಸಿ ಜನರ ಮನಸ್ಸು ಗೆಲ್ಲಬೇಕು ಹೊರತು ಸ್ವಹಿತಕ್ಕಾಗಿ ಒಡೆದು ಆಳುವ ನೀತಿ ಅನುಸರಿಸಬಾರದು ಎಂದರು.

ಗ್ರಾಮದ ಮುಖಂಡರು ಚುನಾವಣೆ ವೇಳೆಯಲ್ಲಿ ರಾಜಕೀಯ ಮಾಡಲಿ ಚುನಾವಣೆ ಮುಗಿದ ಮೇಲೆ ಸಹೋದರರಂತೆ ಬದುಕಬೇಕು. ಇಲ್ಲದೆ ಹೋದರೆ ಗ್ರಾಮದ ನೆಮ್ಮದಿ ಹಾಳಾಗುತ್ತದೆ. ಬಿಚಗೊಂಡನಹಳ್ಳಿ ಗ್ರಾಮಸ್ಥರು ಎಲ್ಲಾ ಪಕ್ಷದ ಮುಖಂಡರೊಂದಿಗೆ ಉತ್ತಮ ಬಾಂಧವ್ಯ ಹೊಂದುವ ಮೂಲಕ ಅಭಿವೃದ್ಧಿ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ. ಇದು ಗ್ರಾಮಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದು ನುಡಿದರು. ನಗರ ಯೋಜನಾ ಪ್ರಾಧಿಕಾರ ಮಾಜಿ ಅಧ್ಯಕ್ಷ ಅಣತಿ ಆನಂದ್, ಅಣತಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಟಿ.ಚಂದ್ರಶೇಖರ್, ಬಿ.ಟಿ.ಧರ್ಮ, ಬಿ.ಜೆ.ರಮೇಶ್, ನಾಗೇಶ್, ಮುಖಂಡರಾದ ಸಂತೋಷ್, ಬಿ.ಜೆ.ನಂಜೇಗೌಡ, ಜಯರಾಂ, ವಳಗೇರಹಳ್ಳಿ ರಾಮು, ದೇವಾಲಯ ಭಕ್ತರು ಹಾಗೂ ಬಿಚಗೊಂಡನಹಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

# ಹಸುವಿಗೆ ನೀರು ಕುಡಿಸಲು ಕೆರೆಗೆ ಇಳಿದ ಮಾವ–ಅಳಿಯ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲ್ಲೂಕಿನ ಎನ್. ಹೊಸಳ್ಳಿ ಗ್ರಾಮದಲ್ಲಿ ಮಾವ–ಅಳಿಯ ಕೆರೆಯಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ.

ಗ್ರಾಮದ ಪ್ರಭಾಕರ್ (40) ಹಾಗೂ ಅಳಿಯ ಪ್ರತೀಕ್ (12) ಮೃತರು. ಬೇಸಿಗೆ ರಜೆ ಹಿನ್ನಲೆಯಲ್ಲಿ ಪ್ರಭಾಕರ್ ಅವರ ಸಹೋದರಿ ಮಗ ಪ್ರತೀಕ್ ಮಾವನ ಮನೆಗೆ ಬಂದಿದ್ದ. ಭಾನುವಾರ ಮಧ್ಯಾಹ್ನ ಜಮೀನು ಪಕ್ಕದ ಕೆರೆಯಲ್ಲಿ ಹಸುವಿಗೆ ನೀರು ಕುಡಿಸಲೆಂದು ಇಬ್ಬರೂ ತೆರಳಿದ್ದರು. ಹಸುವಿನ ಹಗ್ಗ ಹಿಡಿದು ಕೆರೆಗೆ ಇಳಿದ ಪ್ರತೀಕ್ ಗೊತ್ತಾಗದೆ ಆಳಕ್ಕೆ ಇಳಿದಿದ್ದಾನೆ.



ಆತ ನೀರಿನಲ್ಲಿ ಮುಳುಗುತ್ತಿರುವುದನ್ನು ಕಂಡ ಪ್ರಭಾಕರ್ ರಕ್ಷಣೆಗೆ ಧಾವಿಸಿದ್ದು, ನೀರಿನ ಆಳ ಹೆಚ್ಚಿದ್ದರಿಂದ ವಾಪಸ್ ಬರಲು ಸಾಧ್ಯವಾಗದೆ ಮೃತಪಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳ ಸಿಬ್ಬಂದಿ ಹಾಗೂ ಗಂಡಸಿ ಪೊಲೀಸರು ನಿರಂತರ ಕಾರ್ಯಾಚರಣೆ ಮೂಲಕ ಎರಡೂ ಶವಗಳನ್ನು ಮೇಲಕ್ಕೆತ್ತಿದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಪ್ರಭಾಕರ್ ಅವರು ಪ್ರತಿದಿನ ಅದೇ ಕೆರೆಯಲ್ಲಿ ಹಸುವಿಗೆ ನೀರು ಕುಡಿಸುತ್ತಿದ್ದರು. ಅಳಿಯನನ್ನು ಜೊತೆಗೆ ಕರೆದುಕೊಂಡು ಹೋಗಿದ್ದರು. ಕೆರೆ ದಡದಿಂದಲೇ ವಾಪಾಸ್ ಬರುತ್ತಾನೆಂದು ಪ್ರಭಾಕರ್ ಆ ಕಡೆಗೆ ಗಮನ ಹರಿಸಲಿಲ್ಲ. ಪ್ರತೀಕ್ ಮುಳುಗುತ್ತಿದ್ದಂತೆ ರಕ್ಷಣೆಗೆ ಧಾವಿಸಿದರೂ ವಾಪಸ್ ಬರಲು ಸಾಧ್ಯವಾಗಿಲ್ಲ. ದುದ್ದ ಸಮೀಪದ ಸೋಮನಹಳ್ಳಿ ಗ್ರಾಮದ ಪ್ರತೀಕ್ ಪ್ರತಿವರ್ಷ ಬೇಸಿಗೆ ರಜೆಯಲ್ಲಿ ಮಾವನ ಮನೆಗೆ ಬರುತ್ತಿದ್ದನಂತೆ. ರಜೆಯ ದಿನಗಳನ್ನು ತನ್ನ ಮಗ ತವರು ಮನೆಯಲ್ಲಿ ಕಳೆಯಲೆಂದು ಪ್ರಭಾಕರ್ ಸಹೋದರಿ ಕಳುಹಿಸಿಕೊಟ್ಟಿದ್ದರು.

# ಶ್ರವಣಬೆಳಗೊಳದಲ್ಲಿ 20ನೇ ಪ್ರಾಕೃತ ಘಟಿಕೋತ್ಸವ

## ಜೈನಮಠದ ಸ್ವಾಮೀಜಿ ಅವರಿಂದ ಪದವಿ ಪ್ರದಾನ I ನೂರಾರು ವಿದ್ಯಾರ್ಥಿಗಳು ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಶ್ರವಣಬೆಳಗೊಳ: ಇಲ್ಲಿನ ಜೈನ ಮಠದ ದವಲತೀರ್ಥಂ ಆವರಣದಲ್ಲಿ 20ನೇ ಪ್ರಾಕೃತ ಘಟಿಕೋತ್ಸವ ಅರ್ಥಪೂರ್ಣವಾಗಿ ನೆರವೇರಿತು. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ನೇತೃತ್ವದಲ್ಲಿ 1993ರಲ್ಲಿ ಅಸ್ತಿತ್ವ ಪಡೆದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯನ್ನು ಪ್ರಸ್ತುತ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದೆ. ಇದುವರೆಗೆ 15 ಪ್ರಶಸ್ತಿಗಳನ್ನು ನೀಡಲಾಗಿದೆ.

ಸ್ವಸ್ತಿಶ್ರೀಚಾರುಕೀರ್ತಿ ಪಂಡಿತಾಚಾರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಮಾತನಾಡಿ, ಪ್ರಾಕೃತ ಭಾಷೆ ಭಗವಾನ್ ಮಹಾವೀರರ ಕಾಲದ ಜನಸಾಮಾನ್ಯರ ಆಡು ಭಾಷೆಯಾಗಿದೆ. ಈ ಪುರಾತನ ಪ್ರಾಕೃತ ಭಾಷೆಯಲ್ಲಿಯೇ ಎಲ್ಲಾ ಜೈನ ಧಾರ್ಮಿಕ ಅಂಶಗಳು ಅಡಗಿವೆ. ಯುವ ಸಮುದಾಯ ಇತ್ತೀಚೆಗೆ ಪ್ರಾಕೃತ ಭಾಷೆಯ ಅಧ್ಯಯನದಲ್ಲಿ ತೊಡಗುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದರು. ಕರ್ನಾಟಕದಲ್ಲಿ ಪ್ರಾಕೃತ ವಿಶ್ವವಿದ್ಯಾಲಯದ ರೂಪಿಸಲು ಚಿಂತನೆ ನಡೆದಿದೆ. ಈ ಭಾಷೆಗೆ ಕೇಂದ್ರ ಸರ್ಕಾರ ಶಾಸ್ತ್ರೀಯ ಸ್ಥಾನ ಮಾನ ನೀಡಿ ಗೌರವಿಸಿದೆ. ರಾಜ್ಯ ಸರ್ಕಾರವು ಭಾಷೆ ಬೆಳವಣಿಗೆಗೆ ಅಗತ್ಯ ಸಹಕಾರ ನೀಡುತ್ತಿದ್ದು, ವಿದ್ಯಾರ್ಥಿಗಳು ಸದುಪಯೋಗ ಪಡೆಯಬೇಕೆಂದರು.

ಭಾರತ ಹೊರತಾಗಿ ಜರ್ಮನಿ, ಜಪಾನ್, ರಷ್ಯಾ, ಅಮೆರಿಕ, ಆಸ್ಟ್ರೇಲಿಯಾ, ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂ, ಫಿನ್ಲೆಂಡ್ ಮೊದಲಾದ ದೇಶಗಳಲ್ಲಿ ಜೈನ ವಿದ್ಯೆಯ ವಿವಿಧ ರೂಪಗಳಲ್ಲಿ ಅಧ್ಯಯನ ನಡೆಯುತ್ತಿದೆ. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಜೈನ ವಿದ್ಯೆಗೆ ಸಂಬಂಧಿಸಿದ ವಿಭಾಗಗಳಿದ್ದು, ಜೈನ ವಿದ್ಯೆ ಅಧ್ಯಯನವು ಹೊಸ ವೈಜ್ಞಾನಿಕ ದಿಕ್ಕುಗಳನ್ನು ಪಡೆದುಕೊಳ್ಳುತ್ತಿದೆ. ಜೈನ ವಿದ್ಯೆಯ ಅನುಶೀಲನೆ ಆಧುನಿಕ ಸಂದರ್ಭದಲ್ಲಿ ರಾಷ್ಟ್ರೀಯ ಚರಿತ್ರ ನಿರ್ಮಾಣಕ್ಕೆ ಸಹಾಯಕವಾಗಬೇಕು ಮತ್ತು ಪ್ರಾಯೋಗಿಕವಾಗಿರಬೇಕು. ಸಂಶೋಧನೆ ಸಂಪ್ರದಾಯ, ಪಂಥ, ಮಂಡಲಗಳಿಂದ ಮುಕ್ತವಾಗಿರಬೇಕು. ಆಗ ಜೈನ ವಿದ್ಯಾ ಕಾರ್ಯವು ಪರಿಣಾಮಕಾರಿಯಾಗಿ ನಡೆಯುತ್ತದೆಂದು ಅಭಿಪ್ರಾಯಟ್ಟರು.

**942 ವಿದ್ಯಾರ್ಥಿಗಳ ಪ್ರವೇಶ**

ಈ ಸಂಸ್ಥೆಯಿಂದ ಪ್ರಾಕೃತದ ಪರೀಕ್ಷೆಯನ್ನು ಭಾರತದಾದ್ಯಂತ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಪ್ರಾಕೃತ ಪ್ರವೇಶ, ಡಿಪ್ಲೊಮಾ, ಪ್ರಥಮಾ, ಮಧ್ಯಮಾ, ವಿಶಾರದ ಮತ್ತು ರತ್ನ ತರಗತಿಗಳಲ್ಲಿ ಒಟ್ಟು 531 ವಿದ್ಯಾರ್ಥಿಗಳು, ಹಿಂದಿ ಮಾಧ್ಯಮದಲ್ಲಿ 396 ವಿದ್ಯಾರ್ಥಿಗಳು ಇಂಗ್ಲಿಷ್ ಮಾಧ್ಯಮದಲ್ಲಿ 15 ಒಟ್ಟು ಮೂರು ಮಾಧ್ಯಮಗಳಿಂದ 942 ವಿದ್ಯಾರ್ಥಿಗಳು ಪ್ರಾಕೃತ ಕೋರ್ಸ್‌ನ ವಿವಿಧ ತರಗತಿಗಳಲ್ಲಿ ಅಧ್ಯಯನಕ್ಕೆ ನೊಂದಣಿಯಾಗಿದ್ದಾರೆ.

ಈ ಸಾಲಿನಲ್ಲಿ ಕನ್ನಡ ಮಾಧ್ಯಮದಿಂದ ಪರೀಕ್ಷೆಗೆ ಹಾಜರಾಗಿ 478 ಜನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಹಿಂದಿ ಮಾಧ್ಯಮದಿಂದ 318, ಇಂಗ್ಲಿಷ್ 13 ವಿದ್ಯಾರ್ಥಿಗಳು ಸೇರಿ 809 ವಿದ್ಯಾರ್ಥಿಗಳು ಮೂರು ಮಾಧ್ಯಮದಲ್ಲಿ ಉತ್ತೀರ್ಣರಾಗಿದ್ದಾರೆ.

**ಕನ್ನಡ ಮಾಧ್ಯಮ ಪದಕ ವಿಜೇತರು**

ಪ್ರಾಕೃತ ರತ್ನ ತರಗತಿಯಿಂದ ಸುವರ್ಣ ಪದಕವನ್ನು ಹಾಸನದ ರುಕೀಯ ಇರ್ಷಾದ್, ರಜತ ಪದಕವನ್ನು ಬೆಳಗಾವಿಯ ಪ್ರಿಯಕಾರಿಣಿ ಅಭಿನಂದನ ಕೊಚೇರಿ, ಕಂಚಿನ ಪದಕವನ್ನು ಬೆಳಗಾವಿಯ ಭಾರತಿ ಮಹಾವೀರ ಉಪಾಧ್ಯೆ ಪಡೆದರು.

ಪ್ರಾಕೃತ ವಿಶಾರದ ತರಗತಿಯಿಂದ ಸುವರ್ಣ ಪದಕವನ್ನು ಬಾಗಲಕೋಟೆ ಜಿಲ್ಲೆಯ ಅಲಗೂರಿನ ವೃಷಭ ಪರಮಗೊಂಡ, ರಜತ ಪದಕವನ್ನು ಬೆಂಗಳೂರಿನ ಟಿ.ಎಸ್.ಶಾಂತಲ, ಪ್ರಾಕೃತ ಮಧ್ಯಮಾ ತರಗತಿಯಿಂದ ಸುವರ್ಣ ಪದಕವನ್ನು ನರಗುಂದ ಕೇಂದ್ರದ ಕವಿತಾ ವರ್ಧಮಾನ ವಜ್ರಾಂಗಿ, ರಜತ ಪದಕವನ್ನು ಬೆಳಗಾವಿಯ ಅಂಕಿತಾ ವಿಶಾಲ್ ಅನಗೋಳ್‌ಕರ್, ಕಂಚಿನ ಪದಕವನ್ನು ಬಾಗಲಕೋಟೆ ಜಿಲ್ಲೆಯ ಅಲಗೂರಿನ ಸಮ್ಮೇದ ಸು.ಬೆಳಗಲಿ ಪಡೆದಿದ್ದಾರೆ.

ಪ್ರಾಕೃತ ಪ್ರಥಮಾ ತರಗತಿಯಿಂದ ಸುವರ್ಣ ಪದಕವನ್ನು ಪುತ್ತೂರಿನ ಡಾ. ಮೈತ್ರಿ ಭಟ್, ರಜತ ಪದಕವನ್ನು ತುರುವೇಕೆರೆ ತಾಲ್ಲೂಕಿನ ತಂಡಗದ ಟಿ.ಪಿ.ರೂಪಾ, ಕಂಚಿನ ಪದಕವನ್ನು ಬೆಳಗಾವಿಯ ಶ್ರದ್ಧಾ ಪ್ರಸಾದ್ ಪಾಟೀಲ್ ಪಡೆದರು.

ಘಟಿಕೋತ್ಸವ ಸಮಾರಂಭದ ಅಧ್ಯಕ್ಷತೆಯನ್ನು ಬಾಹುಬಲಿ ಪ್ರಾಕೃತ ವಿದ್ಯಾಪೀಠ ಕಾರ್ಯಾಧ್ಯಕ್ಷ ಎ.ಸಿ.ವಿದ್ಯಾಧರ್ ವಹಿಸಿದ್ದರು. ನಿಪ್ಸಾರ್ ಸಂಸ್ಥೆಯ ನಿರ್ದೇಶಕ ಡಾ. ರಮೇಶ್ ಶಿರಹಟ್ಟಿ ಶಾಸ್ತ್ರಿ ಅವರು ಪ್ರಾಕೃತ ಭಾಷೆಯಲ್ಲಿ ಪ್ರಮಾಣ ವಚನ ಬೋಧಿಸಿದರು. ಪ್ರಾಕೃತ ಪರೀಕ್ಷಾಂಗ ವಿಭಾಗದ ಕುಲಸಚಿವ ಡಾ. ಎನ್.ಲೋಕಕುಮಾರ್, ಪ್ರಾಕೃತ ಮತ್ತು ಹಿಂದಿ ಭಾಷಾ ವಿಭಾಗದ ಅಧ್ಯಕ್ಷ ಡಾ. ರಾಜೇಂದ್ರ, ಪಾಟೀಲ್, ಅಜಿತ್ ಬಿ. ಬಳಿಗಾರ, ಶ್ರುತಿ ಧನುಷ್ ಮತ್ತಿತರರಿದ್ದರು.

# ಜಮೀನಿಗೆ ತೆರಳುವ ರಸ್ತೆಗೆ ವಿನಾಕಾರಣ ಅಡ್ಡಿ: ಆರೋಪ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಜಮೀನಿಗೆ ತೆರಳಲು ಅನುಕೂಲವಾಗಲೆಂದು ತಹಶೀಲ್ದಾರ್ ಆದೇಶದ ಮೇರೆಗೆ ರಸ್ತೆ ನಿರ್ಮಿಸಿಕೊಂಡಿದ್ದರೂ ಇಲ್ಲಸಲ್ಲದ ಆರೋಪ ಮಾಡಿ ರಸ್ತೆ ಬಂದ್ ಮಾಡಲು ಪ್ರಯತ್ನ ನಡೆಸಿದ್ದಾರೆಂದು ಚಿಕ್ಕಸಾಲಾವರ ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮದ ಭರತ್ ಮಾತನಾಡಿ, ಜಮೀನಿಗೆ ತೆರಳಲು ರಸ್ತೆ ಅಗತ್ಯವಿದೆ ಎಂದು ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಗಿತ್ತು. ಗ್ರಾಮ ಲೆಕ್ಕಾಧಿಕಾರಿ, ಸಿಬ್ಬಂದಿ ಉಪಸ್ಥಿತಿಯಲ್ಲಿಯೇ ಸ್ಥಳ ಗುರುತು ಮಾಡಿ ಆ ಬಳಿಕ ಸ್ವಂತ ಖರ್ಚಿನಲ್ಲಿ ರಸ್ತೆ ನಿರ್ಮಾಣ ಮಾಡಿಕೊಂಡಿದ್ದೆವು. ಆದರೆ ರಸ್ತೆ ನಿರ್ಮಾಣದಿಂದ ಕೆಲವರು ವಿವಾದ ಸೃಷ್ಟಿಸುತ್ತಿದ್ದಾರೆ. ರಸ್ತೆಗೆ ತೆರಳುವ ಮಾರ್ಗದಲ್ಲಿ ರೇವತಿ ಹಾಗು ಹರೀಶ್ ಎಂಬುವವರ ಮನೆಯಿದೆ. ಹರೀಶ್ ಅವರ ಒಪ್ಪಿಗೆ ಪಡೆದು ರಸ್ತೆಯನ್ನು ನಿರ್ಮಿಸಲಾಗಿದೆ. ಈಗ ಹರೀಶ್ ಹಾಗು ರೇವತಿ ದಂಪತಿ ರಸ್ತೆ ನಿರ್ಮಾಣ ಪೂರ್ಣಗೊಂಡಿದ್ದರೂ ಸಹ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದು ತಮಗೆ ಜೀವ ಬೆದರಿಕೆ ಇದೆ ಎಂದು ನಮ್ಮ ಮೇಲೆ ವಿನಾಕಾರಣ ಸುಳ್ಳು ಆರೋಪ ಮಾಡುತ್ತಿದ್ದಾರೆ. ಸರ್ವೆ ನಂ. 24, 23, 25, 16 ಸೇರಿ ಇತರ ಹಿಡುವಳಿ ಜಮೀನಿಗೆ ತೆರಳಲು ಈ ರಸ್ತೆಯೇ ಆಧಾರವಾಗಿದೆ. ಈಗ ಜಮೀನಿಗೆ ತೆರಳದಂತೆ ಮೋರಿಯನ್ನು ಕಿತ್ತು ಹಾಕಿದ್ದಾರೆ. ತಿರುಗಾಡುವ ರಸ್ತೆಗೆ ತೊಂದರೆ ಮಾಡುತ್ತಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಯಶೋಧ ಮಾತನಾಡಿ, ರಸ್ತೆ ನಿರ್ಮಾಣಕ್ಕೆ ನನ್ನ ಜಮೀನನ್ನು ಕೂಡ ಬಿಟ್ಟುಕೊಟ್ಟಿದ್ದೇನೆ. ಇಲ್ಲಿವರೆಗೆ ರಸ್ತೆ ಇಲ್ಲದ್ದರಿಂದ ಜಮೀನನ್ನು ಪಾಳು ಬಿಡಲಾಗಿದೆ. ನಮ್ಮ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ ತಿರುಗಾಡಲು ತೊಂದರೆ ನೀಡುತ್ತಾ ಅವ್ಯಾಚ್ಯ ಪದಬಳಸಿ ನಿಂದಿಸುತ್ತಿದ್ದಾರೆ. ಜಮೀನಿಗೆ ಹೋಗುವ ಸಂದರ್ಭ ಕತ್ತಿ ಮತ್ತಿತರ ವಸ್ತುಗಳನ್ನು ತೆಗೆದುಕೊಂಡು ಹೋಗುವುದು ಸಾಮಾನ್ಯ. ಅದನ್ನೇ ನೆಪ ಮಾಡಿಕೊಂಡು ಕೊಲೆಗೆ ಯತ್ನಿಸುತ್ತಿದ್ದಾರೆಂದು ಆರೋಪ ಮಾಡುತ್ತಿರುವುದು ಸುಳ್ಳು. ನಮ್ಮಿಂದ ಅವರಿಗೆ ಯಾವುದೇ ರೀತಿಯ ಜೀವ ಬೆದರಿಕೆ ಇಲ್ಲವೆಂದರು. ರೈತ ದ್ಯಾವಪ್ಪ ಅವರು ಮಾತನಾಡಿ, ಈಗಿರುವ ರಸ್ತೆಯು ನೂರಾರು ವರ್ಷಗಳಿಂದ ಕಾಲುದಾರಿಯಾಗಿತ್ತು. ಜಮೀನು ಇರುವ ಸ್ಥಳದಿಂದ ಮುಖ್ಯ ರಸ್ತೆಗೆ ಸುಮಾರು ಒಂದು ಕಿ.ಮೀ.ದೂರವಿರುವುದರಿಂದ ಭತ್ತ ಹಾಗು ಇನ್ನಿತರ ಬೆಳೆ ಬೆಳೆಯಲು ಕಷ್ಟವಾಗುತ್ತಿದ್ದರಿಂದ ಜಮೀನು ಮಾಲೀಕರ ಒಪ್ಪಿಗೆ ಮೇರೆಗೆ ರಸ್ತೆ ನಿರ್ಮಿಸಿಕೊಂಡಿದ್ದೇವೆ. ಮತ್ತೆ ಇವರೇನಾದರೂ ತೊಂದರೆ ನೀಡಿದರೆ ನಮ್ಮ ಜಮೀನುಗಳನ್ನು ಮಾರಾಟ ಮಾಡಲು ಸಿದ್ಧರಿದ್ದೇವೆಂದರು.

ಗ್ರಾಮದ ಉಮೇಶ್, ತಮ್ಮಣ್ಣ, ಪುಟ್ಟಮ್ಮ, ಉಪೇಂದ್ರ ,ದ್ಯಾವಪ್ಪ, ತೀರ್ಥ, ಆರತಿ ಇತರರಿದ್ದರು.

# ತೊಳಸಿ ಗ್ರಾಮದಲ್ಲಿ ಬಸವೇಶ್ವರ ದೇಗುಲ ಉದ್ಘಾಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಾಸನ ಮತ್ತು ಮಂಡ್ಯ ಜಿಲ್ಲೆಯ ಗಡಿ ಗ್ರಾಮವಾದ ಕಿಕ್ಕೇರಿ ಹೋಬಳಿ ತೊಳಸಿ ಗ್ರಾಮದ ಐತಿಹಾಸಿಕ ಶ್ರೀ ಬಸವೇಶ್ವರ ದೇವಸ್ಥಾನ ಉದ್ಘಾಟನೆ ಸಮಾರಂಭ ಭಾನುವಾರ ಅರ್ಥಪೂರ್ಣವಾಗಿ ನೆರವೇರಿತು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಮಾತನಾಡಿ, ಗ್ರಾಮದಲ್ಲಿ ಎಲ್ಲರೂ ಪ್ರೀತಿ ಸೋದರತ್ವದಿಂದ ಬಾಳ್ವೆ ಮಾಡಬೇಕು. ಎಲ್ಲರೂ ಒಂದೇ ಎಂಬ ಭಾವನೆಯಿಂದ ಸಹಜೀವನ ನಡೆಸಬೇಕು. ಇಂತಹ ಐತಿಹಾಸಿಕ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿಕೊಂಡು ಗ್ರಾಮಸ್ಥರು ಒಗ್ಗಟ್ಟಿನಿಂದ ಸ್ನೇಹಮಯಿ ಜೀವನವನ್ನು ನಡೆಸಬೇಕೆಂದು ಸಲಹೆ ನೀಡಿದರು.

ನಮ್ಮ ಕಾಂಗ್ರೆಸ್ ಸರ್ಕಾರವು ಯಾವುದೇ ತರಹದ ಪಕ್ಷ, ಜಾತಿ ಭೇದ ಮಾಡದೆ ಪ್ರತಿಯೊಂದು ಮನೆಗೂ ಐದು ಗ್ಯಾರಂಟಿಗಳನ್ನು ತಲುಪಿಸುವಲ್ಲಿ ಯಶಸ್ವಿಯಾಗಿದೆ. ಪಂಚ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಬಡವರ ಪರವಾಗಿದ್ದೇವೆ ಎಂಬುದನ್ನು ನಾವು ಸಾಬೀತುಪಡಿಸಿದ್ದೇವೆ. ತೊಳಸಿ ಗ್ರಾಮದಲ್ಲಿ ಐತಿಹಾಸಿಕ ಹಿನ್ನಲೆ ಹೊಂದಿರುವ ಶ್ರೀ ಬಸವೇಶ್ವರ ಸ್ವಾಮಿಯ ದೇವಸ್ಥಾನವನ್ನು ನಿರ್ಮಾಣ ಮಾಡುವಲ್ಲಿ ಶ್ರಮಿಸಿರುವ ಗ್ರಾಮದ ಹಿರಿಯ ಮತ್ತು ಕಿರಿಯ ಮುಖಂಡರಿಗೆ ಧನ್ಯವಾದ ಸಲ್ಲಿಸುತ್ತೇನೆಂದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬಿ. ಪ್ರಕಾಶ್, ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್, ಸುರೇಶ್, ಎಂ.ಬಿ.ಹರೀಶ್, ಎಸ್. ಅಂಬರೀಶ್, ರಾಮಕೃಷ್ಣೇಗೌಡ, ಮಂಜೇಗೌಡ, ರಾಮಣ್ಣ, ಕೋಣಪ್ಪನ ರಾಮಣ್ಣ, ಮರಿಯಣ್ಣ ರಾಮಣ್ಣ ಇತರರಿದ್ದರು.

# 2027ಕ್ಕೆ ಮಲೇರಿಯಾ ಮುಕ್ತ ಜಿಲ್ಲೆ ಗುರಿ: ತಂಡ ಪರಿಶೀಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಜಿಲ್ಲೆಯಲ್ಲಿ 2027ರ ವೇಳೆಗೆ ಮಲೇರಿಯಾ ನಿರ್ಮೂಲನೆ ಗುರಿ ಹೊಂದಲಾಗಿದ್ದು, ಈ ನಿಟ್ಟಿನಲ್ಲಿ ಜಿಲ್ಲಾದ್ಯಂತ ನಡೆಯುತ್ತಿರುವ ಮಲೇರಿಯಾ ನಿಯಂತ್ರಣ ಕಾರ್ಯಕ್ರಮಗಳನ್ನು ಪರಿಶೀಲಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ತಂಡ ಆಗಮಿಸಿತ್ತು.

ವಿವಿಧ ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳಿಗೆ ಭೇಟಿ ನೀಡಿ ಮಲೇರಿಯಾ ರೋಗ ಪತ್ತೆ, ಚಿಕಿತ್ಸೆ ಹಾಗೂ ರೋಗ ಹರಡದಂತೆ ಕೈಗೊಂಡ ಕ್ರಮಗಳ ಮಾಹಿತಿ ಪಡೆದಿದೆ.

2021 ರಿಂದ ಇಲ್ಲಿವರೆಗೆ ಸ್ಥಳೀಯವಾಗಿ ಹರಡಿರುವ ಮಲೇರಿಯಾ ಪ್ರಕರಣಗಳು ಜಿಲ್ಲೆಯಲ್ಲಿ ಕಂಡುಬಂದಿಲ್ಲ. ವರದಿಯಾದ ಎಲ್ಲಾ ಪ್ರಕರಣಗಳು ಬೇರೆ ಮಲೇರಿಯಾ ಪೀಡಿತ ಜಿಲ್ಲೆ ಅಥವಾ ರಾಜ್ಯಗಳಿಂದ ಮಲೇರಿಯಾ ರೋಗ ತಗುಲಿಸಿಕೊಂಡು ಬಂದಿರುವವರಾಗಿರುತ್ತಾರೆ. ಜಿಲ್ಲೆಯನ್ನು ಮಲೇರಿಯಾ ಮುಕ್ತವಾಗಿರಿಸಲು ಹಾಗೂ ಮಲೇರಿಯಾ ನಿವಾರಣ ಗುರಿ ತಲುಪಲು ಕೈಗೊಳ್ಳಬೇಕಾದ ಅಗತ್ಯ ಕ್ರಮಗಳನ್ನು ಈಗಾಗಲೇ ಇಲಾಖೆಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಕೈಗೊಳ್ಳಲಾಗಿದೆ.

ಭೋಪಾಲ್‌ನ ಹಿರಿಯ ಪ್ರಾದೇಶಿಕ ನಿರ್ದೇಶಕ ಡಾ. ಚಂದ್ರಶೇಖರ್, ವಲಯ ಸಹ ಸಂಯೋಜಕ ಡಾ. ಸೇಜಲ್, ನವದೆಹಲಿ ಎನ್ ವಿಬಿಡಿಸಿಪಿ ಡಾ. ನೀಲಂ, ರಾಜ್ಯ ಕಾರ್ಯಕ್ರಮ ಅಧಿಕಾರಿ ಡಾ. ಹರ್ಷದೀಪ್ ಕೌರ್ ಅವರನ್ನು ಒಳಗೊಂಡ ತಂಡವು ಏ. 15ರಿಂದ 18ರ ವರೆಗೆ ಜಿಲ್ಲೆಯ ವಿವಿಧೆಡೆ ಎಲ್ಲಾ ಹಂತದ ಜಿಲ್ಲಾಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಅದರ ವ್ಯಾಪ್ತಿಗೆ ಬರುವಂತಹ ಉಪಕೇಂದ್ರಗಳಲ್ಲಿ ಹಾಗು ಜಿಲ್ಲಾ ಮಟ್ಟದಿಂದ ಕೈಗೊಂಡಿರುವ ಮಲೇರಿಯಾ ಕಾರ್ಯಚಟುವಟಿಕೆಗಳ ಅಧ್ಯಯನ ಮಾಡಿ ಹಾಗು ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಕ್ಷೇತ್ರ ಸಿಬ್ಬಂದಿ ವರದಿ ಹಾಗು ಆಶಾ ಕಾರ್ಯಕರ್ತೆಯರ ಕಾರ್ಯಕ್ಷಮತೆ ಮತ್ತು ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಪ್ರಯೋಗ ಶಾಲೆಗಳ ಮೇಲ್ವಿಚಾರಣೆ ಮತ್ತು ದಾಖಲಾತಿ ನಿರ್ವಹಣೆ ಬಗ್ಗೆ ಪರಿಶೀಲನೆ ನಡೆಸಿದೆ.

ಜಿಲ್ಲೆಗೆ ಆಮದು ಆಗಿರುವ ಮಲೇರಿಯಾ ಪ್ರಕರಣಗಳು ವರದಿಯಾಗಿರುವ ಗ್ರಾಮ ಭೇಟಿ ಮತ್ತು ಪ್ರಕರಣದ ಮನೆ ಭೇಟಿ ನಡೆಸಿರುತ್ತಾರೆ. ಮಲೇರಿಯಾ ದಾಸ್ತಾನು ನಿರ್ವಹಣೆಯ ದಾಖಲಾತಿಗಳ ಪರಿಶೀಲನೆ ಮತ್ತು ಮಲೇರಿಯಾ ಸಕ್ರಿಯ ಮತ್ತು ಸ್ಥಿತ ರಕ್ತ ಲೇಪನ ಸಂಗ್ರಹಣೆ ವರದಿಯನ್ನು ಐಹೆಚ್‌ಐಪಿ ಪೋರ್ಟಲ್‌ನಲ್ಲಿ ಸಮರ್ಪಕವಾಗಿ ಅಂಕಿ ಅಂಶವನ್ನು ವರದಿ ಮಾಡಿರುವ ಹಾಗು ರಾಷ್ಟ್ರೀಯ ಕಾರ್ಯಕ್ರಮವಾದ ಮಲೇರಿಯಾಕ್ಕೆ ಅನುಗುಣವಾಗಿ ಜಿಲ್ಲೆಯಲ್ಲಿ ಪರಿಶೀಲನೆ ಮಾಡಿ ಜಿಲ್ಲೆಯನ್ನು ಮಲೇರಿಯಾ ಮುಕ್ತ ಜಿಲ್ಲೆ ಎಂದು ಘೋಷಣೆ ಮಾಡಿ ಜಿಲ್ಲೆಗೆ ಕೇಂದ್ರ ಮಟ್ಟದಿಂದ ಮಲೇರಿಯಾ ಮುಕ್ತ ಜಿಲ್ಲೆ ಎಂದು ಘೋಷಣೆ ಪ್ರಮಾಣ ಪತ್ರವನ್ನು ವಿತರಣೆ ಮಾಡುವ ಸಲುವಾಗಿ ಮಲೇರಿಯಾ ಕೇಂದ್ರ ತಂಡವು ಜಿಲ್ಲೆಗೆ ಆಗಮಿಸಿದೆ.

ಹೊರ ರಾಜ್ಯಗಳಿಂದ ಬರುವ ವಲಸೆ ಜನರ ಹಾಗು ಈ ಜಿಲ್ಲೆಯಿಂದ ಸಮಸ್ಯಾತ್ಮಕ ಪ್ರದೇಶಗಳಿಗೆ ಹೋಗಿ ಬಂದವರ ರಕ್ತಲೇಪನ ಪರೀಕ್ಷೆ ಮಾಡಲಾಗುತ್ತದೆ. ಮಲೇರಿಯಾ ಪತ್ತೆಯಾದರೆ ಕೂಡಲೇ ಅವರಿಗೆ ಚಿಕಿತ್ಸೆ ನೀಡಲಾಗುತ್ತದೆ. ಮಲೇರಿಯಾ ಹರಡುವ ಅನಾಫಿಲಿಸ್ ಸೊಳ್ಳೆ ಬೆಳೆಯುವ ನೀರಿನ ತಾಣಗಳಾದ ಕೆರೆ, ಕಟ್ಟೆ, ಹಳ್ಳ, ಬಾವಿ ಇತ್ಯಾದಿ ಕಡೆ ಲಾರ್ವಾಹಾರಿ ಮೀನುಗಳಾದ ಗಪ್ಪಿ ಮತ್ತು ಗ್ಯಾಂಬೂಷಿಯಾವನ್ನು ಬಿಡಲಾಗಿದೆ. ಅದರಿಂದ ಆ ಮೀನುಗಳು ತಿಂದು ಅನಾಫಿಲಿಸ್ ಸೊಳ್ಳೆಗಳು ಬೆಳೆಯದಂತೆ ನೋಡಿಕೊಳ್ಳುತ್ತವೆ.

ಯಾವುದೇ ಜ್ವರವಿರಲಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ ಮಲೇರಿಯಾ ಇರಬಹುದು ಎಂಬುದು ಕಾರ್ಯಕ್ರಮದ ಘೋಷಣೆಯಾಗಿದ್ದು, ಸಾರ್ವಜನಿಕರು ಮಲೇರಿಯಾ ನಿಯಂತ್ರಣ ಹಾಗು ಜಿಲ್ಲೆಯಲ್ಲಿ ಮಲೇರಿಯಾ ನಿವಾರಣಾ ಗುರಿ ತಲುಪಲು ಸಹಕರಿಸಲು ತಂಡ ಕೋರಿದೆ.

# ಮನೆ ಬೀಗ ಮುರಿದು ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮನೆ ಬೀಗ ಮುರಿದು ಒಳನುಗ್ಗಿರುವ ಕಳ್ಳರು ನಗದು, ಬೆಳ್ಳಿ ಆಭರಣ ಸೇರಿ 90 ಸಾವಿರ ರೂ. ಮೌಲ್ಯದ ಸಾಮಾಗ್ರಿ, ಕಳವು ಮಾಡಿರುವ ಘಟನೆ ತಾಲ್ಲೂಕಿನ ಬಸವನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸಿ.ಎಸ್.ದಿನೇಶ್ ಅವರ ಮನೆಯಲ್ಲಿ ಏ. 17ರ ರಾತ್ರಿ ಕಳ್ಳತನ ನಡೆದಿದೆ. ಕುಟುಂಬ ಸದಸ್ಯರೆಲ್ಲರೂ ಹಳೆಯ ಮನೆಗೆ ಬೀಗ ಹಾಕಿ ಹೊಸ ಮನೆಗೆ ತೆರಳಿದ್ದರು. ಮಾರನೇ ದಿನ ಬೆಳಿಗ್ಗೆ ಬಂದು ನೋಡಿದಾಗ ಬಾಗಿಲು ಮುರಿದಿರುವುದು ತಿಳಿದಿದೆ. ಬಲವಾದ ಆಯುಧದಿಂದ ಬೀಗ ಮುರಿದಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ ಕಾಗದ ಪತ್ರಗಳನ್ನು ಚೆಲ್ಲಾಪಿಲ್ಲಿ ಮಾಡಿ 32 ಸಾವಿರ ರೂ. ಹಣ, 200 ಗ್ರಾಂ ತೂಕದ ಬೆಳ್ಳಿ ಸರ ಮತ್ತು ಪದಕ (45 ಸಾವಿರ ರೂ. ಮೌಲ್ಯ) ಹಾಗು 12 ಸಾವಿರ ರೂ. ಬೆಲೆಯ ಟಿವಿ ಕದ್ದಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವರದಕ್ಷಿಣೆ ಕಿರುಕುಳ ಗೃಹಿಣಿ ಆತ್ಮಹತ್ಯೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಪ್ರೀತಿಸಿ ಮದುವೆಯಾಗಿದ್ದರೂ ಗಂಡನ ವರದಕ್ಷಿಣೆ ಕಿರುಕುಳದ ಹಿಂಸೆ ತಾಳಲಾರದೆ ಗೃಹಿಣಿಯೊಬ್ಬರು ಕಲ್ಯಾಣಿಯಲ್ಲಿ ಬಿದ್ದು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲ್ಲೂಕಿನ ಸಿಗರನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಹಳೇಕೋಟೆ ಹೋಬಳಿ ಸಬ್ಬನಹಳ್ಳಿ ಗ್ರಾಮದ ಅನುಸೂಯ-ಕುಮಾರ ಅವರ ಪುತ್ರಿ ಎಸ್.ಕೆ.ಭವ್ಯ ಮೃತರು. ಸಿಗರನಹಳ್ಳಿ ಗ್ರಾಮದ ರಂಗಸ್ವಾಮಿ ಮತ್ತು ಭ್ಯಾಗ್ಯಮ್ಮ ಅವರ ಮಗ ಎಸ್.ಆರ್.ಶಿವರಾಜು ಅವರೊಂದಿಗೆ 4 ವಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದರು. ದಂಪತಿಗೆ ಎರಡೂವರೆ ವರ್ಷದ ಹೆಣ್ಣು ಮಗಳು ಇದ್ದಾರೆ.

ಇತ್ತೀಚೆಗೆ ದಾಂಪತ್ಯದಲ್ಲಿ ವಿರಸ ಉಂಟಾಗಿ ತವರು ಮನೆಯಿಂದ ವರದಕ್ಷಿಣೆ ತರುವಂತೆ ಶಿವರಾಜು ಕಿರುಕುಳ ನೀಡುತ್ತಿದ್ದ. ಈ ಸಂಬಂಧ ಹಲವು ಬಾರಿ ಸಂಧಾನ ಮಾಡಲಾಗಿತ್ತು. ಏ. 16ರಂದು ಮದ್ಯದ ಅಮಲಿನಲ್ಲಿ ಶಿವರಾಜು ಹೆಂಡತಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು ಎನ್ನಲಾಗಿದೆ. ಅದರಿಂದ ಮನನೊಂದ ಅವರು ಗ್ರಾಮದ ಕಲ್ಯಾಣಿಗೆ ಬಿದ್ದು ಸಾವನ್ನಪ್ಪಿದ್ದಾರೆ. ಹೊಳೆನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್-21

ಕ್ರಿ.ಪೂ. 753: ರೋಮ್ ನಗರದ ಸ್ಥಾಪನೆ ನಡೆದ ದಿನವೆಂದು ಪರಿಗಣಿಸಲಾಗುತ್ತದೆ.

1526: ಬಾಬರ್ ಇಬ್ರಾಹಿಂ ಲೋದಿ ಅವರನ್ನು ಸೋಲಿಸಿ ಮುಘಲ್ ಸಾಮ್ರಾಜ್ಯಕ್ಕೆ ಬುನಾದಿ ಹಾಕಿದರು.

1782: ಬ್ಯಾಂಕಾಕ್‌ನಲ್ಲಿ ಹೊಸ ರಾಜಧಾನಿ ಸ್ಥಾಪನೆಯಾಗಿ ಥೈಲ್ಯಾಂಡ್‌ನ ಹೊಸ ಯುಗ ಆರಂಭವಾಯಿತು.

1918: ಪ್ರಸಿದ್ಧ ಜರ್ಮನ್ ಯೋಧ ವಿಮಾನ ಚಾಲಕ ಮನ್‌ಫ್ರೆಡ್ ವಾನ್ ರಿಚ್‌ತೋಫೆನ್ (ರೆಡ್ ಬ್ಯಾರನ್) ಯುದ್ಧದಲ್ಲಿ ಸಾವನ್ನಪ್ಪಿದರು.

**ಜನನ**

1926: 2ನೇ ರಾಣಿ ಎಲಿಜಬೆತ್, ಯುನೈಟೆಡ್ ಕಿಂಗ್‌ಡಮ್‌ನ ದೀರ್ಘಾವಧಿ ರಾಣಿ.

1947: ಇಗ್ಗಿ ಪಾಪ್, ಪ್ರಸಿದ್ಧ ರಾಕ್ ಸಂಗೀತಗಾರ

**ಮರಣ**

2016: ಪ್ರಿನ್ಸ್, ಜಾಗತಿಕ ಖ್ಯಾತಿಯ ಸಂಗೀತ ತಾರೆ

# ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪಗೆ ಸರ್ವೋತ್ತಮ ಸೇವಾ ಪ್ರಶಸ್ತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪುರಸಭಾ ವ್ಯಾಪ್ತಿಯಲ್ಲಿ ಬದಲಾವಣೆಗೆ ಪ್ರಯತ್ನಿಸುತ್ತಿರುವ ಪುರಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ 2025ನೇ ಸಾಲಿನ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಪಟ್ಟಣ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಲವು ವರ್ಷಗಳಿಂದ ಇದ್ದು ಶಾಸಕರ ಮಾರ್ಗದರ್ಶನದಲ್ಲಿ ಮಳಲಿ ಗ್ರಾಮದಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕವನ್ನು ನಿರ್ಮಾಣ ಮಾಡಿದ್ದು, ಪಟ್ಟಣ ವ್ಯಾಪ್ತಿಯಲ್ಲಿ ವಿಪರೀತವಾಗಿದ್ದ ಬೀದಿ ನಾಯಿಗಳ ಕಾಟವನ್ನು ಕಡಿಮೆ ಮಾಡಲು ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆಯನ್ನು ಬೀದಿ ನಾಯಿಗಳಿಗೆ ಮಾಡಲು ಮುಂದಾಗಿದ್ದು, ಪಟ್ಟಣ ವ್ಯಾಪ್ತಿಯಲ್ಲಿ ಫುಟ್ ಪಾತ್ ಒತ್ತುವರಿ ಮಾಡಿದ್ದ ಬೀದಿ ಬದಿ ವ್ಯಾಪಾರಿಗಳನ್ನು ತೆರವು ಮಾಡಿದ್ದು ಅಲ್ಲದೆ ಹಲವು ಜನಪರ ಕಾರ್ಯಗಳನ್ನು ಪುರಸಭಾ ವ್ಯಾಪ್ತಿಯಲ್ಲಿ ಮಹೇಶ್ವರಪ್ಪ ಮುಂದಾಗಿದ್ದರಿಂದ ರಾಜ್ಯ ಸರ್ಕಾರವು ಅವರನ್ನು ಸರ್ವೋತ್ತಮ ಸೇವಾ ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರಿಂದ ಏ. 21 ರಂದು ಹಾಸನದ ಕಲಾಭವನದಲ್ಲಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

# ಕಾರು ಡಿಕ್ಕಿಯಾಗಿ ಸ್ಕೂಟರ್ ಸವಾರ ಸಾವು

ಹಾಸನ: ಕಾರು ಡಿಕ್ಕಿಯಾಗಿ ಸ್ಕೂಟರ್ ಸವಾರ ಮೃತಪಟ್ಟಿರುವ ಘಟನೆ ಶಾಂತಿಗ್ರಾಮ ಹೋಬಳಿ ಕಂಚನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗಾಣಿಗರಹೊಸಳ್ಳಿ ಗ್ರಾಮದ ಕುಮಾರ್ ಮೃತರು. ಏ. 18ರ ಸಂಜೆ 5 ಗಂಟೆ ಸಮಯದಲ್ಲಿ ಸ್ಕೂಟರ್‌ನಲ್ಲಿ ಕೊಂತಗೊಡನಹಳ್ಳಿಗೆ ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಕುಮಾರ್ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ದೇಶದ ದರಿದ್ರ ಪಕ್ಷ ಕಾಂಗ್ರೆಸ್ ಹೆಚ್.ಎನ್. ಚಂದ್ರಶೇಖರ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಮಹಿಳಾ ಮೀಸಲಾತಿ ಮಸೂದೆ ಪರಾಭವಗೊಂಡಿದ್ದಕ್ಕೆ ಸಂಭ್ರಮಿಸಿರುವ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳು ದೇಶಕ್ಕೆ ಅಂಟಿದ ದರಿದ್ರ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿವೆ ಎಂದು ಬಿಜೆಪಿ ರಾಜ್ಯ ವಕ್ತಾರ ಹೆಚ್.ಎನ್.ಚಂದ್ರಶೇಖರ್ ಕಿಡಿಕಾರಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನ ಕುತಂತ್ರ ನೀತಿಯನ್ನು ದೇಶದ ಜನರು ದಶಕಗಳಿಂದ ನೋಡಿಕೊಂಡು ಬಂದಿದ್ದಾರೆ. ಲೋಕಸಭೆಯಲ್ಲಿ ಮಸೂದೆಗೆ ವಿರೋಧಿಸುವ ಮೂಲಕ ತಾವು ಮಹಿಳೆಯರ ಏಳಿಗೆ ಸಹಿಸುವುದಿಲ್ಲ ಎಂಬುದನ್ನು ಸಾಬೀತು ಮಾಡಿದ್ದಾರೆ. ಆ ಮೂಲಕ ಕ್ಷೇತ್ರ ಪುನರ್ ವಿಂಗಡಣೆಗೂ ತಮ್ಮ ಸಹಮತವಿಲ್ಲ ಎಂದು ಕಾಂಗ್ರೆಸ್ ಸಂವಿಧಾನದ ಆಶಯಗಳನ್ನೇ ಗಾಳಿಗೆ ತೂರಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ಮೋದಿ ಅವರು ಕೇವಲ ರಾಜಕೀಯವಾಗಿ ಪಕ್ಷವನ್ನು ದೂರವಿಡಬೇಕೆಂಬ ಕಾರಣದಿಂದ ಕಾಂಗ್ರೆಸ್ ಮುಕ್ತ ಭಾರತದ ಸಂಕಲ್ಪ ತೊಟ್ಟಿಲ್ಲ. ಕಾಂಗ್ರೆಸ್‌ನ ವಿಷಕಾರಿ ಮನಸ್ಥಿತಿಯನ್ನು ದೇಶದಿಂದ ತೊಲಗಿಸಬೇಕೆನ್ನುವುದು ಪ್ರಧಾನಿಯ ಆಶಯವಾಗಿದೆ. ಕಾಂಗ್ರೆಸ್‌ನ ದರಿದ್ರ ಮನಸ್ಥಿತಿಗೆ ಸಾಕಷ್ಟು ನಿದರ್ಶನಗಳಿವೆ. ಒಂದೇ ಕುಟುಂಬದ ಹಿತ ಬಯಸುವುದೇ ಅವರ ಉದ್ದೇಶವಾಗಿದೆ. ದೇಶದ ಮಹಿಳೆಯರಿಗೆ ಕಾಂಗ್ರೆಸ್ ಮಹಾದ್ರೋಹ ಎಸಗಿದೆ. ಹಿಂದೂ ಕೋಡ್ ಬಿಲ್ ತರುವಾಗ ಮುಸ್ಲಿಂ ಮಹಿಳೆಯರಿಗೆ ನ್ಯಾಯ ಕೊಡಿಸಬೇಕೆಂದು ಅವರಿಗೆ ಅನ್ನಿಸಲಿಲ್ಲ. 1996ರಲ್ಲಿ ಮೊದಲ ಬಾರಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ನಂತರ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ಮಹಿಳಾ ಮೀಸಲಾತಿ ಜಾರಿಗೆ ಯತ್ನಿಸಿದರೂ ವಿನಾಶಕಾರಿ ಮನಸ್ಥಿತಿಯ ಕಾಂಗ್ರೆಸ್‌ನವರು ಅದಕ್ಕೆ ಅವಕಾಶ ನೀಡಲಿಲ್ಲವೆಂದು ಆರೋಪಿಸಿದರು.

2010ರಲ್ಲಿ ರಾಜ್ಯಸಭೆಯಲ್ಲಿ ಮಸೂದೆ ಪಾಸಾಗಿದ್ದರೂ ಲೋಕಸಭೆಯಲ್ಲಿ ಅದನ್ನು ಮಂಡಿಸಲಿಲ್ಲ. ಹೀಗಾಗಿ ನರೇಂದ್ರ ಮೋದಿ ಸರ್ಕಾರ 2023ರಲ್ಲಿ ಮಸೂದೆ ಅಂಗೀಕರಿಸಿತು. 2034ರ ಚುನಾವಣೆಗೆ ಮಸೂದೆ ಜಾರಿಗೊಳಿಸಬೇಕೆಂದು ಮೊದಲು ನಿರ್ಧರಿಸಲಾಗಿತ್ತಾದರೂ ಚುನಾವಣೆಗಳಿಂದ ಮಹಿಳೆಯರು ಮತ್ತೆ 10 ವರ್ಷ ಹಿಂದುಳಿಯುತ್ತಾರೆಂದು 2029ಕ್ಕೆ ಜಾರಿಗೊಳಿಸಲು ಪ್ರಯತ್ನಿಸಿದರು. ಆದರೆ ಮಹಿಳೆಯರ ಏಳಿಗೆ ಸಹಿಸದ ಕಾಂಗ್ರೆಸ್ ಮಸೂದೆಗೆ ವಿರೋಧಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಸಿಕ್ಕಾಗ ದೇಶದ ಜನಸಂಖ್ಯೆ 35 ರಿಂದ 40 ಕೋಟಿ ಇತ್ತು. 2026ರಲ್ಲಿ ಸುಮಾರು ಮೂರು ಪಟ್ಟು ಅಂದರೆ 146-147 ಕೋಟಿ ದಾಟಿದೆ. ಆದರೆ ಲೋಕಸಭಾ ಸದಸ್ಯರ ಸಂಖ್ಯೆ 543 ಇದೆ. ಮುಂದುವರೆದಿದೆ. ಇದರಿಂದ ಜನಸಂಖ್ಯೆಯ ಅನುಪಾತಕ್ಕೆ ಲೋಕಸಭಾ ಸದಸ್ಯರ ಸಂಖ್ಯೆ ಹೆಚ್ಚಾಗದೇ ಇರುವುದರಿಂದ ಆಡಳಿತ ಕಷ್ಟವಾಗುತ್ತಿದೆ. ಲೋಕಸಭಾ ಸ್ಥಾನವನ್ನು 850ಕ್ಕೆ ಹೆಚ್ಚಿಸಲು ಕಾಂಗ್ರೆಸ್‌ಗೆ ಇಷ್ಟವಿಲ್ಲ. ಪ್ರತಿ 10 ವರ್ಷಕ್ಕೊಮ್ಮೆ ಕ್ಷೇತ್ರ ಪುನರ್ ವಿಂಗಡಣೆ ಮಾಡಬೇಕೆಂದು ಸಂವಿಧಾನ ಹೇಳಿದೆ. ಈ ವಿಚಾರದಲ್ಲಿ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತದೆಂದು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಪ್ರತಿ ರಾಜ್ಯದಲ್ಲಿ ಶೇ. 50 ರಷ್ಟು ಕ್ಷೇತ್ರಗಳ ಸಂಖ್ಯೆ ಹೆಚ್ಚಿಸುತ್ತೇವೆಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದರೂ ಕಾಂಗ್ರೆಸ್ ಅರಿಯುತ್ತಿಲ್ಲ ಎಂದರು.

ದೇಶದ ಪ್ರತಿ ಮಹಿಳೆಯರು ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ಬೂಟಾಟಿಕೆಯನ್ನು ಗಮನಿಸಿದ್ದು ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸುತ್ತಾರೆಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ನಗರ ಮಂಡಲ ಅಧ್ಯಕ್ಷ ಯೋಗೀಶ್ ಮಂಜಣ್ಣ, ವಕ್ತಾರ ಆರ್.ಮೋಹನ್, ಮಾಧ್ಯಮ ಪ್ರಮುಖ್ ಬಿ.ವೇದಾವತಿ ಹಾಗೂ ನಗರ ವಕ್ತಾರ ದಯಾನಂದ್ ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248